# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1236 |
| ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಮತ್ತು ಯಗಚಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳು ಯಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಯೋಜನೆಗಳಡಿಯಲ್ಲಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ ಹಾಗೂ ಯಗಚಿ ಯೋಜನೆಯಡಿಯಲ್ಲಿ ಯಾವುದೇ ಗ್ರಾಮವು ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವುದಿಲ್ಲ. |
| ಆ) | ಶೀತಪೀಡಿತವಾಗಿಲ್ಲವೆಂದು ಘೋಷಿಸಲ್ಪಟ್ಟಿರುವ ಗ್ರಾಮಗಳಲ್ಲಿ ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿದೆ; (ಈ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು) | ಶೀತಪೀಡಿತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ 12 ಸಂಖ್ಯೆಯ ಕಾಮಗಾರಿಗಳನ್ನು ರೂ.16.42 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಇ) | ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿರುವುದಿಲ್ಲವೆಂದು ಸರ್ಕಾರವೇ ಘೋಷಿಸಿರುವುದು ನಿಜವೇ; ಇದ್ದಲ್ಲಿ, ವಿವರಿಸುವುದು; | ಹೌದು. ಸರ್ಕಾರದ ಆದೇಶ ಸಂಖ್ಯೆ: ಕಂಇ/07ಎಕ್ಯೂಹೆಚ್ 2021 ಬೆಂಗಳೂರು, ದಿನಾಂಕ:27-08-2021 ರಲ್ಲಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿರುವುದಿಲ್ಲವೆಂದು ಘೋಷಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |
| ಈ) | ಸರ್ಕಾರದ ಆದೇಶದನ್ವಯ ಸದರಿ ಗ್ರಾಮವು ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಮಾಡಿದ್ದಲ್ಲಿ, ಅಭಿವೃದ್ಧಿ ಕಾರ್ಯಗಳ ಮತ್ತು ಪೂರ್ಣಗೊಂಡ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು; | ಈ ಆದೇಶದನ್ವಯ, ತಾಂತ್ರಿಕ ಸಮಿತಿಯ ಸದಸ್ಯರುಗಳ ಶಿಫಾರಸ್ಸಿನಂತೆ ಶೀತಪೀಡಿತವಾಗುವುದನ್ನು ತಡೆಗಟ್ಟಲು ತಾಂತ್ರಿಕ ಮಾರ್ಗೋಪಾಯಗಳನ್ನು ಅಳವಡಿಸುವ ಕಾಮಗಾರಿಗಳಾದ ಕಟ್‌ಆಫ್ ನಾಲೆ/ ಟ್ರೆಂಚ್, ಸೀಪೇಜ್ ಡ್ರೇನ್, ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಮುಂತಾದವುಗಳನ್ನು ಕೈಗೊಳ್ಳಲು ರೂ.27.75 ಕೋಟಿಗಳ ಅವಶ್ಯಕತೆ ಇರುವುದಾಗಿ ಅಂದಾಜಿಸಲಾಗಿದೆ. ವಿವರವಾದ ಯೋಜನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುವುದು. |
| ಉ) | ಪ್ರಸ್ತುತ ಬಾಕಿಯಿರುವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | ಈಗಾಗಲೇ ಕೈಗೆತ್ತಿಕೊಂಡಿರುವ 12 ಸಂ. ಕಾಮಗಾರಿಗಳ ಪೈಕಿ 10 ಸಂ. ಸಂಖ್ಯೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದಂತೆ ಕೆ.ಶಿಂಗೇನಹಳ್ಳಿ ಗ್ರಾಮದ ಕಾಮಗಾರಿಗಳ ಸಂಬಂಧ ನ್ಯಾಯಾಲಯ ಪ್ರಕರಣವಿದೆ ಮತ್ತು ಪ್ರಗತಿಯಲ್ಲಿರುವ ತೆವಡೆಹಳ್ಳಿ ಗ್ರಾಮದ ಕಾಮಗಾರಿಯನ್ನು 06 ತಿಂಗಳುಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಸಂ:ಜಸಂಇ 50 ಎನ್‌ಎಲ್‌ಎ 2025

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ:1236ಕ್ಕೆ ಅನುಬಂಧ-1.**

**ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಯೋಜನೆಯಡಿಯಲ್ಲಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳ ಪಟ್ಟಿ**

| ಕ್ರಸಂ | ಜಿಲ್ಲೆ | ತಾಲ್ಲೂಕು | ಗ್ರಾಮ |
|---|---|---|---|
| 1 | ಹಾಸನ | ಅರಕಲಗೂಡು | ನಿಲುವಾಗಿಲು |
| 2 | | ಅರಕಲಗೂಡು | ಮಗ್ಗೆಕಾವಲು |
| 3 | | ಅರಕಲಗೂಡು | ವಡ್ಡರಹಳ್ಳಿ |
| 4 | | ಚನ್ನರಾಯಪಟ್ಟಣ | ಆನೆಕೆರೆ |
| 5 | | ಚನ್ನರಾಯಪಟ್ಟಣ | ಕೆ.ಶಿಂಗೇನಹಳ್ಳಿ |
| 6 | | ಚನ್ನರಾಯಪಟ್ಟಣ | ಗದ್ದೆಬಿಂಡನಹಳ್ಳಿ |
| 7 | | ಚನ್ನರಾಯಪಟ್ಟಣ | ನಂದೀಪುರ |
| 8 | | ಹಾಸನ | ಗೊರೂರು |
| 9 | | ಹಾಸನ | ಮುಕುಂದೂರು |
| 10 | | ಹೊಳೆನರಸೀಪುರ | ಎಳ್ಳೇಶಪುರ |
| 11 | | ಹೊಳೆನರಸೀಪುರ | ಕಟ್ಟೆಬೆಳಗುಲಿ |
| 12 | | ಹೊಳೆನರಸೀಪುರ | ಕಟ್ಟೆಬೆಳಗುಲಿ ಕೊಪ್ಪಲು |
| 13 | | ಹೊಳೆನರಸೀಪುರ | ಕುಂಚೇವು ಹೊಸಹಳ್ಳಿ |
| 14 | | ಹೊಳೆನರಸೀಪುರ | ಚಿಕ್ಕಜಾಗವಳ್ಳಿ |
| 15 | | ಹೊಳೆನರಸೀಪುರ | ತೆವಡಹಳ್ಳಿ |
| 16 | | ಹೊಳೆನರಸೀಪುರ | ಬಿದರಕ್ಕ |
| 17 | | ಹೊಳೆನರಸೀಪುರ | ಬೀಚೇನಹಳ್ಳಿ |
| 18 | | ಹೊಳೆನರಸೀಪುರ | ಭೀಮನಹಳ್ಳಿ |
| 19 | | ಹೊಳೆನರಸೀಪುರ | ವಡ್ಡರಪಾಳ್ಯ |

ಕಾವೇರಿ ನೀರಾವರಿ ನಿಗಮ ನಿಯಮಿತ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 117 (1236) ಕ್ಕೆ ಉತ್ತರ.

**ಅನುಬಂಧ-2**

## ಹೇಮಾವತಿ ಯೋಜನಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಮುಕುಂದೂರು ಮತ್ತು ಗೊರೂರು ಗ್ರಾಮಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರಗಳು.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಷರಾ |
|---|---|---|---|
| | ಹಾಸನ ತಾಲ್ಲೂಕು | | |
| 1 | a)Improvements to Road from **Mukundoor** village to GM Road Reh., in **Kattaya hobli in Hassan Taluk** coming under HLBC. b)Improvements to Road from Mukundoor village to Hemavathy river in kattaya hobli in Hassan Taluk coming under HLBC. | 40.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| 2 | Providing Asphalting to **Mukunduru** village road in hassan taluk under HRP. | 35.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| 3 | Construction of RCC box canal for Changaravally Anecut Canal from Ch:1275.00 mtr to 2285.00 mtr in the seepage affected area of **Gorur** village. | 75.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| | ಚನ್ನರಾಯಪಟ್ಟಣ ತಾಲ್ಲೂಕು | | |
| 4 | Construction of CC drain and CC road to avoid seepage in **Nandipura** village in Channarayapatna | 46.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| 5 | Construction of seepage drain and CC road to avoid seepage in **K.Shingenahally** village in Channarayapatna Taluk. | 92.00 | ಕಾಮಗಾರಿಯನ್ನು ಕೈಗೊಳ್ಳಲು ಗ್ರಾಮಸ್ಥರು ಅಡಚಣೆ ಮಾಡಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಮತ್ತು ಕಾಮಗಾರಿಯ ಸಂಬಂಧ ನ್ಯಾಯಾಲಯ ಪ್ರಕರಣವಿರುತ್ತದೆ. |
| | ಹೊಳೆನರಸೀಪುರ ತಾಲ್ಲೂಕು | | |
| 6 | Construction of Seepage drain to control dampness around **Bidarakka village** in Holenarasipura Taluk under the atchkat of HRBHLC. | 440.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| 7 | Construction of seepage drain to control dampness, Flagging concrete, cc road and Storm water drain and Skin wall in **Thevadahalli village** in Holenarasipura taluk and providing cc box lining minor of Dy. 34 of HRBC. | 395.00 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 8 | Providing CC Lining to D-26 of HRBHLC to control the Seepage around **Bidarakka village** in Holenarasipura Taluk | 460.00 | ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. |
| | ಅರಕಲಗೂಡು ತಾಲ್ಲೂಕು | | |
| 9 | Construction of box drain to seepage effected **Nilavagilu village** coming under Distry No 8 of HRBHLC | 20.00 | ಕಾಮಗಾರಿಯು ಪೂರ್ಣಗೊಂಡಿದೆ |

| | | | |
|---|---|---|---|
| 10 | Providing CC Lining Reconstruction of P.O.s to improvements to embankment from Ch:1500m to 3000m in Dy No 8 of HRBHLC **(Seepage effected Nilavagilu village limit)** | 15.00 | ಕಾಮಗಾರಿಯು ಪೂರ್ಣಗೊಂಡಿದೆ |
| 11 | Construction of Box drain to seepage effected **Vaddarahalli village** coming under Disty.No.13A of HRBHLC. | 15.00 | ಕಾಮಗಾರಿಯು ಪೂರ್ಣಗೊಂಡಿದೆ |
| 12 | **Providing CC lining reconstruction of Pos and improvements to embankment in Dy No 13A of HRBHLC (Seepage effect Vaddarahalli village limit)** | 9.90 | ಕಾಮಗಾರಿಯು ಪೂರ್ಣಗೊಂಡಿದೆ |

ವ್ಯವಸ್ಥಾಪಕ ನಿರ್ದೇಶಕರು

ಕಾನೀನಿನಿ, ಬೆಂಗಳೂರು

ಅನುಬಂಧ-3

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹೇಮಾವತಿ ಮತ್ತು ಯಗಚಿ ಯೋಜನೆಗಳಡಿಯಲ್ಲಿ ಶೀತಪೀಡಿತ ಪ್ರದೇಶವೆಂದು ಹೇಳಲಾಗಿರುವ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿಲ್ಲವೆಂದು ಘೋಷಿಸುವ ಕುರಿತು.

ಓದಲಾಗಿದೆ:-
1) ಸರ್ಕಾರದ ಆದೇಶ ಸಂ.ಕಂಇ 120 ಆರ್‌ಇಹೆಚ್ 92(ಭಾಗ) ದಿನಾಂಕ:15-04-1999.
2) ಸರ್ಕಾರದ ಆದೇಶ ಸಂ.ಕಂಇ 215 ಆರ್‌ಇಹೆಚ್ 2008, ದಿನಾಂಕ:11-12-2008.
3) ಪ್ರಾದೇಶಿಕ ಆಯುಕ್ತರು, ಮೈಸೂರು ಉಪ ವಿಭಾಗ, ಮೈಸೂರು ಇವರ ಪತ್ರ ಸಂ.ಎಲ್ಎಕ್ಯೂ(2)ಸಿ.ಆರ್/17/2018-2019, ದಿನಾಂಕ:19-04-2021.

************

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ಹಾಸನ ಜಿಲ್ಲೆಯಲ್ಲಿನ ಹೇಮಾವತಿ ಮತ್ತು ಯಗಚಿ ಯೋಜನೆಗಳಲ್ಲಿ ಶೀತಪೀಡಿತವಾಗಿರುವುದೆಂದು ಹೇಳಲಾದ ಹಲವು ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಹಾಸನ ಜಿಲ್ಲೆಯಲ್ಲಿ ಹೇಮಾವತಿ ಮತ್ತು ಯಗಚಿ ಯೋಜನೆಗಳು ಪೂರ್ಣಗೊಂಡು ಹಲವು ವರ್ಷಗಳಾದರೂ ಗ್ರಾಮಗಳು ಇನ್ನೂ ಶೀತಪೀಡಿತವಾಗಿವೆ ಎಂದೂ ಅವುಗಳನ್ನು ಸ್ಥಳಾಂತರಿಸಬೇಕೆಂದು ಕೋರಿಕೆ ಬಂದಿದ್ದ ಹಿನ್ನೆಲೆಯಲ್ಲಿ ಸದರಿ ಯೋಜನೆಗಳಡಿಯಲ್ಲಿ ಶೀತಪೀಡಿತವೆಂದು ಹೇಳಲಾಗಿರುವ ಗ್ರಾಮಗಳ ಸ್ಥಳ ತನಿಖೆ ಕೈಗೊಂಡು ಶೀತಪೀಡಿತವಾಗುವುದನ್ನು ತಡೆಗಟ್ಟಲು ತಾಂತ್ರಿಕವಾಗಿ ಸಾಧ್ಯವಿಲ್ಲವೇ ಎಂಬ ಬಗ್ಗೆ ಹಾಗೂ ಶೀತಪೀಡಿತವಾಗುವುದನ್ನು ತಡೆಗಟ್ಟಲು ಸಾಧ್ಯವಿಲ್ಲದಿದ್ದಲ್ಲಿ ಅಂತಹ ಗ್ರಾಮಗಳನ್ನು ಸ್ಥಳಾಂತರಕ್ಕೆ ಶಿಫಾರಸ್ಸು ಮಾಡಲು ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿ ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ದಿನಾಂಕ:19-04-2021ರ ಪತ್ರದಲ್ಲಿ ಆನೆಕೆರೆ ಗ್ರಾಮವು ಶೀತಪೀಡಿತವೆಂದು ಪರಿಗಣಿಸಿ ಪರಿಹಾರ ಪಡೆಯುವ ಸಂಬಂಧ ಸದರಿ ಗ್ರಾಮಸ್ಥರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.51739-51763/2017, 53137-53236/2017 ಮತ್ತು 32749-773/2018ಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳನ್ನು ಮಾನ್ಯ ನ್ಯಾಯಾಲಯವು ದಿನಾಂಕ:17-11-2017, 04-12-2017 ಹಾಗೂ 06-08-2018ರಂದು ಇತ್ಯರ್ಥಪಡಿಸಿ ಹೊರಡಿಸಿರುವ ತೀರ್ಪಿನಲ್ಲಿ ಭೂ ಮಾಲೀಕರ ಮನವಿಗಳನ್ನು ಪರಿಗಣಿಸಿ ತಜ್ಞರ ವರದಿಯನ್ನು ನಿಯಮಾನುಸಾರ ಪರಿಶೀಲಿಸಿ ಸದರಿ ಗ್ರಾಮವು ಶೀತಪೀಡಿತವಾಗಿದ್ದಲ್ಲಿ ಕಾನೂನು ರೀತ್ಯಾ ಪರಿಹಾರ ಪಾವತಿಸಲು ಅರ್ಹವಾಗಿದ್ದಲ್ಲಿ 06 ತಿಂಗಳ ಒಳಗಾಗಿ ಪರಿಹಾರ ಪಾವತಿಸುವಂತೆ ತಿಳಿಸಿರುತ್ತದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ದಿನಾಂಕ:02-02-2021ರಂದು ಆನೆಕೆರೆ ಗ್ರಾಮದಲ್ಲಿ ಸ್ಥಳ ತನಿಖೆ ಕೈಗೊಂಡು, ನಂತರ ನಡೆಸಿದ ಸಭೆಯ

1226
14/9/21

190
14/9/21

ನಡುವಳಿಯಲ್ಲಿ ಉನ್ನತ ಮಟ್ಟದ ಸಮಿತಿಯು ನೀಡಿರುವ ವರದಿಗಳಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯ ಸದಸ್ಯರುಗಳು ನೀಡಿರುವ ವರದಿಗಳನ್ನು ಸಹ ಪರಿಗಣಿಸಿ ಆನೆಕೆರೆ ಗ್ರಾಮದ ಸ್ಥಳ ತಪಾಸಣೆಯಿಂದ ಕಂಡುಬಂದಂತೆ ಸದರಿ ಗ್ರಾಮವು ಶೀತಪೀಡಿತವಾಗಿಲ್ಲ ಹಾಗೂ ಈ ಗ್ರಾಮವನ್ನು ಸ್ಥಳಾಂತರಿಸುವ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸುತ್ತಾ, ಈ ಕೆಳಕಂಡ ತಾಂತ್ರಿಕ ಮಾರ್ಗೋಪಾಯಗಳನ್ನು ಅಳವಡಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಬಹುದು ಎಂಬ ಅಭಿಪ್ರಾಯದೊಂದಿಗೆ ಪ್ರಾದೇಶಿಕ ಆಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

- ಗ್ರಾಮದಲ್ಲಿ ಅವಶ್ಯಕ ಕಟ್‌ಆಫ್‌ನಾಲೆ / ಟ್ರಂಚ್ ನಿರ್ಮಿಸುವುದು ಸೂಕ್ತವಾಗಿರುತ್ತದೆ.
- ಗ್ರಾಮದ ಹೊರಭಾಗದಲ್ಲಿ ಸೀಪೇಜ್ ಡ್ರೈನ್ ನಿರ್ಮಾಣ ಮಾಡುವುದು ಸೂಕ್ತವಾಗಿರುತ್ತದೆ.
- ಊರಿನ ಒಳಭಾಗದಲ್ಲಿ ಈಗಾಗಲೇ ನಿರ್ಮಾಣ ಮಾಡಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಹೊರತು ಪಡಿಸಿ ಉಳಿದ ಭಾಗಕ್ಕೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು ಸೂಕ್ತವಾಗಿರುತ್ತದೆ.
- ಗ್ರಾಮದಲ್ಲಿ ಮಣ್ಣಿನಿಂದ ನಿರ್ಮಾಣ ಮಾಡಿರುವ ಮನೆಗಳ ತಳಪಾಯಕ್ಕೆ ಸ್ಕಿನ್ ವಾಲ್‌ಗಳನ್ನು ನಿರ್ಮಿಸುವುದು ಸೂಕ್ತವಾಗಿರುತ್ತದೆ.
- ಜಿಲ್ಲಾ ಪಂಚಾಯಿತಿ ವತಿಯಿಂದ PMGAY ಹಾಗೂ ಇತರೆ ವಸತಿ ಯೋಜನೆಗಳಲ್ಲಿ ಅರ್ಜಿದಾರರನ್ನು ಗುರ್ತಿಸಿ ಮನೆಗಳನ್ನು ಮಂಜೂರು ಮಾಡಲು ಹಾಗೂ ದುರಸ್ಥಿ ಮಾಡಬಹುದಾದ ಮನೆಗಳಿಗೆ ದುರಸ್ಥಿ ಕಾರ್ಯ ಕೈಗೊಳ್ಳಲು ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಸನ ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿ, ಚನ್ನರಾಯಪಟ್ಟಣ ಇವರಿಗೆ ನಿರ್ದೇಶನ ನೀಡುವುದು.

ಪ್ರಾದೇಶಿಕ ಆಯುಕ್ತರು, ಮೈಸೂರು ಇವರು ಸಲ್ಲಿಸಿರುವ ಸ್ಥಳ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಕಂಇ 07 ಎಕ್ಯೂಹೆಚ್ 2021,</u>**
**<u>ಬೆಂಗಳೂರು, ದಿನಾಂಕ:27-08-2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾದೇಶಿಕ ಆಯುಕ್ತರು, ಮೈಸೂರು ಉಪ ವಿಭಾಗ, ಮೈಸೂರು ಇವರ ಅಧ್ಯಕ್ಷತೆಯಲ್ಲಿನ ಉನ್ನತಾಧಿಕಾರಿಗಳ ಸಮಿತಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿ ಹೇಮಾವತಿ ಮತ್ತು ಯಗಚಿ ಯೋಜನೆಗಳ ವ್ಯಾಪ್ತಿಯಲ್ಲಿನ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ **ಆನೆಕೆರೆ** ಗ್ರಾಮವು ಶೀತಪೀಡಿತವಾಗಿಲ್ಲದಿರುವುದರಿಂದ ಹಾಗೂ ಈ ಗ್ರಾಮವನ್ನು ಸ್ಥಳಾಂತರಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಿ ಆದೇಶಿಸಿದೆ.

ಮುಂದುವರೆದು, ಸದರಿ ಗ್ರಾಮವು ಶೀತಪೀಡಿತವಾಗುವುದನ್ನು ತಡೆಗಟ್ಟಲು ಈ ಕೆಳಕಂಡ ತಾಂತ್ರಿಕ ಮಾರ್ಗಸೂಚಿಗಳನ್ನು ಕೂಡಲೇ ಅನುಷ್ಠಾನಗೊಳಿಸುವಂತೆ ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸೂಚಿಸಿದೆ.

1. ಗ್ರಾಮದಲ್ಲಿ ಅವಶ್ಯಕ ಕಟ್‌ಆಫ್‌ನಾಲೆ / ಟ್ರಂಚ್ ನಿರ್ಮಿಸುವುದು.
2. ಗ್ರಾಮದ ಹೊರಭಾಗದಲ್ಲಿ ಸೀಪೇಜ್ ಡ್ರೈನ್ ನಿರ್ಮಾಣ ಮಾಡುವುದು.
3. ಊರಿನ ಒಳಭಾಗದಲ್ಲಿ ಈಗಾಗಲೇ ನಿರ್ಮಾಣ ಮಾಡಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಹೊರತು ಪಡಿಸಿ ಉಳಿದ ಭಾಗಕ್ಕೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು.

4. ಗ್ರಾಮದಲ್ಲಿ ಮಣ್ಣಿನಿಂದ ನಿರ್ಮಾಣ ಮಾಡಿರುವ ಮನೆಗಳ ತಳಪಾಯಕ್ಕೆ ಸ್ಕಿನ್ ವಾಲ್‌ಗಳನ್ನು ನಿರ್ಮಿಸುವುದು.

5. ಜಿಲ್ಲಾ ಪಂಚಾಯಿತಿ ವತಿಯಿಂದ PMGAY ಹಾಗೂ ಇತರೆ ವಸತಿ ಯೋಜನೆಗಳಲ್ಲಿ ಅರ್ಜಿದಾರರನ್ನು ಗುರ್ತಿಸಿ ಮನೆಗಳನ್ನು ಮಂಜೂರು ಮಾಡಲು ಹಾಗೂ ದುರಸ್ಥಿ ಮಾಡಬಹುದಾದ ಮನೆಗಳಿಗೆ ದುರಸ್ಥಿ ಕಾರ್ಯ ಕೈಗೊಳ್ಳಲು ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Srinivas A 27/08/2021

(ಶ್ರೀನಿವಾಸ ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ 1&3)

**ಇವರಿಗೆ:**

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ರಿಜಿಸ್ಟ್ರಾರ್ ಜನರಲ್, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
6. ಪ್ರಾದೇಶಿಕ ಆಯುಕ್ತರು, ಮೈಸೂರು ಉಪವಿಭಾಗ, ಮೈಸೂರು.
7. ಮುಖ್ಯ ಆಡಳಿತಾಧಿಕಾರಿ, ಕಾವೇರಿ ನೀರಾವರಿ ನಿಗಮ, ನಿಯಮಿತ, ಮೈಸೂರು.
8. ಮುಖ್ಯ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ನಿಯಮಿತ, ಗೊರೂರು, ಹಾಸನ ಜಿಲ್ಲೆ.
9. ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ.
10. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ನಿಯಮಿತ, ಬೆಂಗಳೂರು.
11. ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ಜಲಾಶಯ ಯೋಜನೆ-2, ಹಾಸನ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.